ಮೂಲ ದಾವಾ ಸಂಖ್ಯೆ. 111/2023 ಪಿ ಡಬ್ಲ್ಯೂ 4

(ದಿನಾಂಕ 18-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜೆ ಎನ್ ಕೆ ವಕೀಲರಿಂದಃ-

ನಾನು ವ್ಯವಸಾಯ ಮಾಡುತ್ತೇನೆ. ನನಗೆ ಓದಲು ಬರೆಯಲು ಬರುವುದಿಲ್ಲ. ನನಗೆ ವಾದಿಯರು ಮತ್ತು ಪ್ರತಿವಾದಿಯರು ಗೊತ್ತು. ವಾದಿಯರು ಈ ದಾವೆಯನ್ನು ಪ್ರತಿವಾದಿಯ ಮೇಲೆ ಜಮೀನು ವಿಚಾರಕ್ಕಾಗಿ ಹಾಕಿದ್ದಾರೆ. ನಾನು ದಾವಾಸ್ತಿಯನ್ನು ನೋಡಿದ್ದೇನೆ. ದಾವಾಸ್ತಿಯಲ್ಲಿ ಒಂದು ದೊಡ್ಡ ಬಾವಿ ಇದೆ ಎಂದರೆ ಸರಿ. ದಾವಾಸ್ತಿಯಲ್ಲಿ ವಾದಿ ಮತ್ತು ಪ್ರತಿವಾದಿಯರ ಜಮೀನುಗಳ ನಡುವೆ ಒಂದು ದೊಡ್ಡ ಒಡ್ಡು ಇದೆ ಎಂದರೆ ಸಾಕ್ಷಿಯು ನಾನು ಬಹಳ ದಿನದಿಂದ ಆ ಜಮೀನಿಗೆ ಹೋಗಿಲ್ಲ ಆದ್ದರಿಂದ ನನಗೆ ಗೊತ್ತಿಲ್ಲ ಎನ್ನುತ್ತಾರೆ.

ವಾದಿಯು ಸರ್ವೆ ಇಲಾಖೆಗೆ ದಾವಾ ಜಮೀನು ಅಳತೆ ಮಾಡಲು ಅರ್ಜಿ ನೀಡಿದ್ದು ಆ ಬಗ್ಗೆ ಸರ್ವೆ ಇಲಾಖೆಯವರು ಅಳತೆಗಾಗಿ ಬಂದಿದ್ದು ಇರುತ್ತದಂತಾ ನಿಮ್ಮ ಸಾಕ್ಷಿ ಪ್ರಮಾಣಪತ್ರದಲ್ಲಿ ಹೇಳಿದ್ದು ಆ ಸಮಯದಲ್ಲಿ ನೀವು ಹಾಜರಿದ್ರಾ ಎಂದರೆ ಇಲ್ಲ. ಪ್ರತಿವಾದಿಯು 1.69 ಎಕರೆ ಜಮೀನು ಒತ್ತುವರಿ ಮಾಡಿರುತ್ತಾನಂತಾ ನಿಮ್ಮ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಹೇಳಿದ್ದು ಅದನ್ನು ಯಾವ ಆಧಾರದ ಮೇಲೆ ಹೇಳಿದ್ರಿ ಎಂದರೆ ನನಗೆ ಗೊತ್ತಿಲ್ಲ. ನನ್ನ ಸಾಕ್ಷಿ ಪ್ರಮಾಣಪತ್ರವನ್ನು ಬರೆಯಲು ವಕೀಲರಿಗೆ 1ನೇ ವಾದಿ ಮಾಹಿತಿ ನೀಡಿದ್ದಾನೆ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಏನು ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ. ಪ್ರತಿವಾದಿಯು ಯಾವುದೇ ಜಮೀನನ್ನು ಒತ್ತುವರಿ ಮಾಡಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನಗೆ ವಾದಿಯರು ಆತ್ಮೀಯರು ಎಂದರೆ ಸರಿ ಆ ಕಾರಣದಿಂದಾಗ ನಾನು ಅವರ ಪರವಾಗಿ ನಾನು ಸುಳ್ಳು ಸಾಕ್ಷಿ ಪ್ರಮಾಣಪತ್ರವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ